**ದಿನಾಂಕಃ 13–01–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿಗಳ ಪರ ಶ್ರೀ ಎಮ್ ಸಿ ಎಸ್ ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ತಂದೆ. ನನ್ನ ತಾತ ಬೀಮಪ್ಪನಿಗೆ 5 ಜನ ಮಕ್ಕಳು. ಬೀಮಪ್ಪ ರವರಿಗೆ ಹೇಮಪ್ಪ ಎನ್ನುವ ಮಗನಿದ್ದು ಅವರು ಪೋತಿಯಾಗಿರುತ್ತಾರೆ ಎಂದರೆ ಸರಿ. ಸದರಿ ಹೇಮಪ್ಪ ರವರಿಗೆ 3 ನೇ ಪ್ರತಿವಾದಿ ಹೆಂಡತಿ ಇರುತ್ತಾರೆ ಎಂದರೆ ಸರಿ. ಸದರಿ ಹೇಮಪ್ಪ ರವರಿಗೆ ಬೀಮಪ್ಪ , ಜ್ಯೋತಿ , ನಾಗರಾಜ ಎನ್ನುವವರು ಮಕ್ಕಳಿದ್ದು , ಜ್ಯೋತಿ , ನಾಗರಾಜ ತೀರಿಕೊಂಡಿರುತ್ತಾರೆ. ಜ್ಯೋತಿ ರವರ ಗಂಡ ಮಂಜಪ್ಪ ರವರು ತೀರಿಕೊಂಡಿರುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿ ಜ್ಯೋತಿ ಹಾಗೂ ಮಂಜಪ್ಪನ ಮಗನಾಗಿರುತ್ತಾನೆ ಎಂದರೆ ಸರಿ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಎಷ್ಟು ಪಾಲು ಬರುತ್ತದೆಯೋ ಅಷ್ಟೇ ಪಾಲು ಸದರಿ ಹೇಮಪ್ಪ ರವರಿಗೆ ಬರುತ್ತದೆ ಎಂದರೆ ಸರಿ. 3,4,5 ನೇ ಪ್ರತಿವಾದಿಗಳಿಗೆ ಸಹ ಕಾನೂನು ಬದ್ಧವಾಗಿ ದಾವಾ ಆಸ್ತಿಗಳಲ್ಲಿ ಶೇರು ಬರುತ್ತದೆ ಎಂದರೆ ಸರಿ. 5 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಪಾಲು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಇವರೆಗೂ ನಮ್ಮ ತಂದೆ ಮತ್ತು ನನ್ನ ಅಜ್ಜನ ಕಾಲದಿಂದಲೂ ಯಾವುದೇ ಹಿಸ್ಸೆ ಆಗಿರುವುದಿಲ್ಲ ಎಂದರೆ ಸರಿ. ನಾಗರಾಜನಿಗೆ ಮದುವೆಯಾಗದೇ ತೀರಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.